

# ಉದ್ದ ಬಾಲದ ಜಕಾಣಾ



ಚಿತ್ರ– ಲೇಖನ: **ಜಿ. ಆರ್. ಪಂಡಿತ್ ಸಾಗರ**

ಭಾರತ, ದಕ್ಷಿಣ ಏಷ್ಯಾ, ಇಂಡೋನೇಷ್ಯಾ, ಶ್ರೀಲಂಕಾ ಮುಂತಾದ ಕಡೆಗಳಲ್ಲಿ ಹೆಚ್ಚಾಗಿ ವಾಸಿಸುವ ಈ ಪಕ್ಷಿ ಸುಮಾರು 39 ರಿಂದ 58 ಸೆಂಟಿ ಮೀಟರ್ ಉದ್ದವಿರುತ್ತದೆ. ಗಂಡು ಹಕ್ಕಿಯ ತೂಕ 113 ರಿಂದ 135 ಗ್ರಾಮ್. ಇದ್ದರೆ ಹೆಣ್ಣು ಹಕ್ಕಿ ಸುಮಾರು 205 ರಿಂದ 260 ಗ್ರಾಮ್ ನಷ್ಟಿರುತ್ತದೆ.

ಇಂಗ್ಲೀಷ್ ನಲ್ಲಿ **Pheasant-tailed Jacana** ಎದು ಕರೆಯಲ್ಪಡುವ ಇವು **Jacanidae** ಸಂತತಿಗೆ ಸೇರಿದವು. ಕಪ್ಪು ಬಣ್ಣದ ದೇಹದ ಈ ಪಕ್ಷಿಯ ರೆಕ್ಕೆ, ತಲೆಯ ಭಾಗ, ಮತ್ತು ಕತ್ತಿನ ಕೆಳ ಭಾಗ ಬಿಳಿ ಬಣ್ಣ ಹೊಂದಿರುತ್ತದೆ. ಕತ್ತಿನ ಮೇಲ್ಭಾಗ ಬಂಗಾರದ ಬಣ್ಣದಿದ ಕೂಡಿದೆ. ಅದರ ಅಗಲವಾದ ಪಾದ ಕೆರೆಯ ನೀರಿನಲ್ಲಿ ಬೆಳೆಯುವ ತಾವರೆಯಂತಹ ಎಲೆಗಳ ಮೇಲೆ ನಡೆಯುವುದಕ್ಕೆ ಹೇಳಿ ಮಾಡಿಸಿದಂತಿದೆ. ನೀರಿನ ಮೇಲೆ ಹಾರಾಡುವ ಸಣ್ಣ ಸಣ್ಣ ಕೀಟಗಳು, ನೀರಿನೊಳಗಿನ ಸಸ್ಯಗಳು ಈ ಪಕ್ಷಿಗಳ ಆಹಾರ.

ಈ ಜಕಾಣಾಗಳು ಸಾಮಾನ್ಯವಾಗಿ ನೀರಿನಲ್ಲಿ ತೇಲುವ ಸಸ್ಯಗಳ ಮೇಲೆ ಗೂಡುಕಟ್ಟಿ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಜೂನ್ ನಿಂದ ಸೆಪ್ಟಂಬರ್ ವರೆಗೆ ಅಂದರೆ ಮಾನ್ಸೂನ್ ವೇಳೆ ಇವುಗಳ ಸಂತಾನೋತ್ಪತ್ತಿಯ ಸಮಯ. ಹೆಣ್ಣು ಪಕ್ಷಿ ಒಮ್ಮೆಗೆ ಸುಮಾರು 8 ರಿಂದ 10 ಮೊಟ್ಟೆಗಳನ್ನಿಡುತ್ತದೆ. ನಾಲ್ಕು ಕಪ್ಪು ಬಣ್ಣದ ಚುಕ್ಕೆಗಳಿಂದ ಕೂಡಿದ ಕಂದು ಬಣ್ಣದ ಈ ಮೊಟ್ಟೆಗಳನ್ನು ತೇಲುವ ಗೂಡಿನಲ್ಲಿಟ್ಟು ಮರಿ ಮಾಡುತ್ತವೆ. ಸಂತಾನೋತ್ಪತ್ತಿಯ ಸಮಯದಲ್ಲಿ ಉದ್ದನೆಯ ರೆಕ್ಕೆಗಳನ್ನು ಹೊಂದುವುದು (ಸುಮಾರು 6 ಇಂಚಿಗೂ ಹೆಚ್ಚು ಉದ್ದ) ಈ ಪಕ್ಷಿ ಜಾತಿಯ ದೈಹಿಕ ರಚನೆಯ ವಿಶೇಷ.

ಬರದಿಂದ ಬತ್ತುತ್ತಿರುವ ಕೆರೆಗಳಿಂದಾಗಿ ಈ ಪಕ್ಷಿ ಸಂಕುಲ ಅಳಿವಿನಂಚಿಗೆ ಬಂದಿರುವುದು ವಿಷಾದಕರ.